ನೋಂದಣಿ ಸಂಖ್ಯೆ : ಡಿ.ವೈ.ಆರ್.270
ದಿನಾಂಕ : 16–09–1963

ಬ್ಯಾಂಕಿಂಗ್ ವ್ಯವಹಾರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD KA 912 P, Dt. 11-11-1987
ಆಡಳಿತ ಕಚೇರಿ ಸ್ಥಳಾಂತರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD BG BL AO 394, Dt. 22-06-2000

**TGMC BANK**

ನಿಮ್ಮ ನಂಬಿಕೆಯೇ ನಮ್ಮ ಆಸ್ತಿ

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.
☎ : 0816–4021102/03
✉ : tgmc.ho@tgmc.bank.in
🌐 : https://tgmc.bank.in

# 2025–26ನೇ ಸಾಲಿನ 63ನೇ ವಾರ್ಷಿಕ ಸಾಮಾನ್ಯ ಸಭೆಯ

## ಆಹ್ವಾನ ಪತ್ರಿಕೆ

**ಸೆಪ್ಟೆಂಬರ್ 06, 2026ನೇ ಭಾನುವಾರ**

**Book-Post**

ಶ್ರೀಮತಿ/ಶ್ರೀ

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.

## ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು

1. ದೇವತಾ ಪ್ರಾರ್ಥನೆ.
2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ.
3. ಸ್ವಾಗತ.
4. 63ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲಿಸುವುದು.
5. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದೃಢೀಕರಿಸುವುದು.
6. 2025–26ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು ಮುಂದಿನ ವರ್ಷದ ಕಾರ್ಯ ಯೋಜನೆಗಳಿಗೆ ಅನುಮೋದನೆ ಪಡೆಯುವುದು.
7. 2025–26ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನಾ ವರದಿ ಮತ್ತು ಆಡಳಿತ ಮಂಡಳಿಯವರ ಅನುಪಾಲನಾ ವರದಿಯನ್ನು ಪರಿಶೀಲಿಸುವುದು.
8. 2025–26ನೇ ಸಾಲಿನ ಖರ್ಚು ವೆಚ್ಚಗಳನ್ನು ಅನುಮೋದಿಸುವುದು ಹಾಗೂ 2026–27ನೇ ಸಾಲಿನ ಮುಂಗಡ ಪತ್ರ ಮಂಜೂರು ಮಾಡುವುದು.
9. ನಿವ್ವಳ ಲಾಭದ ವಿಲೇವಾರಿ, ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳನ್ನು ಸೃಜಿಸುವುದು.
10. ಉಪವಿಧಿಗಳ ತಿದ್ದುಪಡಿ.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.
12. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು.
13. ಅಧ್ಯಕ್ಷರ ಭಾಷಣ.
14. ವಂದನಾರ್ಪಣೆ.

**ಸದಸ್ಯರು ಮತ್ತು ವಿಶೇಷ ಆಹ್ವಾನಿತರಿಗೆ ಮಾತ್ರ**

**ಉಪಹಾರ**

ಸಮಯ ಬೆಳಿಗ್ಗೆ 8–00 ರಿಂದ 10–00 ಗಂಟೆಯವರೆಗೆ

**ಸ್ಥಳ**

**" ಆರ್.ಟಿ.ಪಿ. ಕನ್ವೆನ್ಷನ್ ಸೆಂಟರ್ "**

ಶೆಟ್ಟಿಹಳ್ಳಿ ರಿಂಗ್ ರಸ್ತೆ, ತುಮಕೂರು

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.

# 63ನೇ ವಾರ್ಷಿಕ ಸಾಮಾನ್ಯ ಸಭೆಯ

## ಆಹ್ವಾನ ಪತ್ರಿಕೆ

ದಿನಾಂಕ 06–09–2026ನೇ ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ಬ್ಯಾಂಕಿನ

63ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ತುಮಕೂರಿನ,
ಶೆಟ್ಟಿಹಳ್ಳಿ ರಿಂಗ್ ರಸ್ತೆಯಲ್ಲಿರುವ

**ಆರ್.ಟಿ.ಪಿ. ಕನ್ವೆನ್ಷನ್ ಸೆಂಟರ್‌ನಲ್ಲಿ**

ಬ್ಯಾಂಕಿನ ಅಧ್ಯಕ್ಷರಾದ

**ಶ್ರೀ ಹೆಚ್. ಎಂ. ದಿವ್ಯಾನಂದಮೂರ್ತಿ**

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ.
ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ

ದಿನಾಂಕ : 03–07–2026
ಸ್ಥಳ : ತುಮಕೂರು

**ಜೆ. ಸುರೇಶ್**
ಮುಖ್ಯ ಕಾರ್ಯನಿರ್ವಾಹಕರು

## ಉಪವಿಧಿಗಳ ತಿದ್ದುಪಡಿ

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 1. | 4.30 | "ಡೆಲಿಗೇಟ್"ಎಂದರೆ, ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಆಡಳಿತ ಮಂಡಳಿಯಿಂದ ನೇಮಕಗೊಂಡ ಬ್ಯಾಂಕಿನ ಒಬ್ಬ ನಿರ್ದೇಶಕ. | "ಡೆಲಿಗೇಟ್" ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ "ಸದಸ್ಯ". | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 2. | 13 | **ಪ್ರತಿರೂಪ ಷೇರು ಪ್ರಮಾಣ ಪತ್ರಗಳ ನೀಡುವಿಕೆ:**<br>ಷೇರು ಪ್ರಮಾಣ ಪತ್ರಗಳು ವಿರೂಪಗೊಂಡಿದ್ದರೆ, ಹರಿದು ಹೋಗಿದ್ದರೆ ಅಥವಾ ಸವೆದು ಹೋಗಿದ್ದರೆ ಅಂತಹವುಗಳನ್ನು ಹಿಂದಿರುಗಿಸಿದರೆ, ಪ್ರತಿರೂಪ ಷೇರು ಪ್ರಮಾಣ ಪತ್ರಗಳನ್ನು ನೀಡತಕ್ಕದ್ದು. ಹಾಗೆಯೇ ನಾಶವಾದ ಅಥವಾ ಕಳೆದುಹೋದ ಷೇರು ಪ್ರಮಾಣ ಪತ್ರಗಳ ಬಗ್ಗೆ ನಿರ್ದೇಶಕ ಮಂಡಳಿಗೆ ಸಮಾಧಾನಕರವಾದ ರೀತಿಯಲ್ಲಿ ಪರಿಹಾರ ಪತ್ರ (ಇಂಡೆಮ್ನಿಟಿ ಬಾಂಡ್) ಸಲ್ಲಿಸಿ ಪ್ರತಿರೂಪ ಪತ್ರಗಳನ್ನು ಪಡೆಯಬಹುದು. ಅಂತಹ ಷೇರು ಪ್ರಮಾಣ ಪತ್ರಗಳನ್ನು ಪ್ರತಿ ಷೇರು ಪ್ರಮಾಣ ಪತ್ರ ಒಂದಕ್ಕೆ 10 ರೂ.ನಂತೆ ಪಾವತಿಸಿ ಪಡೆಯತಕ್ಕದ್ದು. ಹಾಗೆ ನೀಡಲ್ಪಟ್ಟ ಷೇರು ಪ್ರಮಾಣ ಪತ್ರಗಳ ಮೇಲೆ "ಪ್ರತಿರೂಪ" ಎಂದು ನಮೂದಿಸತಕ್ಕದ್ದು. | **ಪ್ರತಿರೂಪ ಷೇರು ಪ್ರಮಾಣ ಪತ್ರಗಳ ನೀಡುವಿಕೆ:**<br>ಷೇರು ಪ್ರಮಾಣ ಪತ್ರಗಳು ವಿರೂಪಗೊಂಡಿದ್ದರೆ, ಹರಿದು ಹೋಗಿದ್ದರೆ ಅಥವಾ ಸವೆದು ಹೋಗಿದ್ದರೆ ಅಂತಹವುಗಳನ್ನು ಹಿಂದಿರುಗಿಸಿದರೆ, ಪ್ರತಿರೂಪ ಷೇರು ಪ್ರಮಾಣ ಪತ್ರಗಳನ್ನು ನೀಡತಕ್ಕದ್ದು. ಹಾಗೆಯೇ ನಾಶವಾದ ಅಥವಾ ಕಳೆದುಹೋದ ಷೇರು ಪ್ರಮಾಣ ಪತ್ರಗಳ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರಿಗೆ ಸಮಾಧಾನಕರವಾದ ರೀತಿಯಲ್ಲಿ ಪರಿಹಾರ ಪತ್ರ (ಇಂಡೆಮ್ನಿಟಿ ಬಾಂಡ್) ಸಲ್ಲಿಸಿ ಪ್ರತಿರೂಪ ಪತ್ರಗಳನ್ನು ಪಡೆಯಬಹುದು. ಅಂತಹ ಷೇರು ಪ್ರಮಾಣ ಪತ್ರಗಳನ್ನು ಪ್ರತಿ ಷೇರು ಪ್ರಮಾಣ ಪತ್ರ ಒಂದಕ್ಕೆ ರೂ.50/–ರಂತೆ ಮತ್ತು ಅನ್ವಯವಾಗುವ ತೆರಿಗೆ (GST) ಪಾವತಿಸಿ ಪಡೆಯತಕ್ಕದ್ದು. ಹಾಗೆ ನೀಡಲ್ಪಟ್ಟ ಷೇರು ಪ್ರಮಾಣ ಪತ್ರಗಳ ಮೇಲೆ "ಪ್ರತಿರೂಪ" ಎಂದು ನಮೂದಿಸತಕ್ಕದ್ದು. | ಬ್ಯಾಂಕಿನ ಆಡಳಿತಾತ್ಮಕ ಕಾರಣಕ್ಕಾಗಿ. |
| 3. | 22.4 | ಬ್ಯಾಂಕಿನ ಸದಸ್ಯರು ಮೃತರಾದಾಗ ಶವ ಸಂಸ್ಕಾರ ಮಾಡಲು ಬ್ಯಾಂಕಿನ ವತಿಯಿಂದ ರೂ.10,000/–ಗಳ ಆರ್ಥಿಕ ನೆರವನ್ನು ಸದಸ್ಯರ ಕುಟುಂಬಕ್ಕೆ ಸಹಾಯಧನವಾಗಿ ನೀಡಬಹುದು. | ಬ್ಯಾಂಕಿನ ಸದಸ್ಯರು ಮೃತರಾದಾಗ ಬ್ಯಾಂಕಿನ ವತಿಯಿಂದ ರೂ.10,000/–ಗಳ ಆರ್ಥಿಕ ನೆರವನ್ನು ಸದಸ್ಯರ ಕುಟುಂಬಕ್ಕೆ ಸಹಾಯಧನವಾಗಿ ನೀಡಬಹುದು. ಈ ಸಹಾಯಧನದ ಕಾಲಮಿತಿಯು ಸದಸ್ಯರು ಮೃತರಾದ ದಿನಾಂಕದಿಂದ 2 ವರ್ಷದೊಳಗಿರಬೇಕು. | ಬ್ಯಾಂಕಿನ ಆಡಳಿತಾತ್ಮಕ ಕಾರಣಕ್ಕಾಗಿ. |
| 4. | 44<br>44.3 | **ಮತ ನೀಡಿಕೆ:**<br>ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ / ಚುನಾವಣೆಯ ದಿನಾಂಕದಿಂದ ಕನಿಷ್ಠ 45 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿ ಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಾಮಾನ್ಯ ಸಭೆಯ / ಚುನಾವಣಾ ದಿನಾಂಕದಿಂದ ಕನಿಷ್ಠ 21 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ; | **ಮತ ನೀಡಿಕೆ:**<br>ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ / ಚುನಾವಣೆಯ ದಿನಾಂಕದಿಂದ ಕನಿಷ್ಠ 30 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ / ಚುನಾವಣೆ ದಿನಾಂಕದಿಂದ ಕನಿಷ್ಠ 20 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದ್ದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 5. | 47(ಅ)<br>1 | **ಮಂಡಳಿಯ ನಿರ್ದೇಶಕರ ಚುನಾವಣೆ:**<br>ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನುಳ್ಳ ಬ್ಯಾಂಕಿನ ಸಂಬಂಧದಲ್ಲಿ ಪ್ರತಿನಿಧಿಗಳ ಚುನಾವಣೆಯನ್ನೂ ಒಳಗೊಂಡಂತೆ ಬ್ಯಾಂಕಿನ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಡೆಸುವ, ಅನ್ವಯವಾಗುವಷ್ಟರ ಮಟ್ಟಿಗೆ ಯಾವುದೇ ಪ್ರತಿನಿಧಿಯ/ನಿರ್ದೇಶಕರ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಕ್ಕೆ ಚುನಾವಣೆಯನ್ನು ನಡೆಸುವ ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಹಾಗೂ ತತ್ಸಂಬಂಧದ ಮತದಾರರ ಪಟ್ಟಿ ತಯಾರಿಸುವ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು | **ಮಂಡಳಿಯ ನಿರ್ದೇಶಕರ ಚುನಾವಣೆ:**<br>ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನುಳ್ಳ ಬ್ಯಾಂಕಿನ ಸಂಬಂಧದಲ್ಲಿ ಪ್ರತಿನಿಧಿಗಳ ಚುನಾವಣೆಯನ್ನೂ ಒಳಗೊಂಡಂತೆ ಬ್ಯಾಂಕಿನ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಡೆಸುವ ಹಾಗೂ ತತ್ಸಂಬಂಧದ ಮತದಾರರ ಪಟ್ಟಿ ತಯಾರಿಸುವ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |
| | 2<br>(ಆ) | **ಬ್ಯಾಂಕಿನ ಮಂಡಳಿಯು :**<br>ಮರಣ, ರಾಜೀನಾಮೆ, ಅನರ್ಹತೆ ಇತ್ಯಾದಿ ಯಾವುದೇ ಕಾರಣದಿಂದ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಅಥವಾ ಪದಾಧಿಕಾರಿಗಳ ಪದದಲ್ಲಿ ಆಕಸ್ಮಿಕ ಖಾಲಿ ಸ್ಥಾನ ಉಂಟಾದಲ್ಲಿ, ಆ ಬಗ್ಗೆ ಕೂಡಲೇ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು; | **ಬ್ಯಾಂಕಿನ ಮಂಡಳಿಯು :**<br>ಕೈಬಿಡಲಾಗಿದೆ. | |
| | 6 | ಬ್ಯಾಂಕಿನ ಯಾರೇ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂತಹ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಆಡಳಿತ ಮಂಡಳಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | ಬ್ಯಾಂಕಿನ ಮಂಡಳಿಯು ಯಾವ ಸದಸ್ಯರ ವರ್ಗದಿಂದ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿದೆಯೋ, ಅದೇ ವರ್ಗದ ಸದಸ್ಯರಿಂದ ನಾಮನಿರ್ದೇಶನ ಮಾಡುವ ಮೂಲಕ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡತಕ್ಕದ್ದು. | |
| | 47(6) | ಬ್ಯಾಂಕಿನ ಯಾರೇ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂತಹ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಆಡಳಿತ ಮಂಡಳಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು, ಸದರಿ ಖಾಲಿ ಸ್ಥಾನವನ್ನು ಸಹಕಾರ ಸಂಘಗಳ ನಿಬಂಧಕರಿಂದ ನಾಮಿನೇಷನ್ ಮೂಲಕ ಭರ್ತಿ ಮಾಡಲಾಗುತ್ತದೆ. | ಕೈಬಿಡಲಾಗಿದೆ. | |

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 6. | 48<br>48.1 | **ಪದಾಧಿಕಾರಿಗಳ ಚುನಾವಣೆ:**<br>ಬ್ಯಾಂಕಿನ ಪದಾಧಿಕಾರಿಗಳ ಪದಾವಧಿಯು ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಮತ್ತು ಅದು ಮಂಡಳಿಯ ಅವಧಿಯ ಜೊತೆಗೆ ಅಂತ್ಯಗೊಳ್ಳತಕ್ಕದ್ದು. ಸಾಮಾನ್ಯ ಚುನಾವಣೆಯ ತರುವಾಯ, ಮಂಡಳಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ, ಇದ್ದಲ್ಲಿ, ಚುನಾವಣೆಗಳನ್ನು ಚುನಾವಣಾ ಪ್ರಾಧಿಕಾರದಿಂದ ನೇಮಕವಾದ ಚುನಾವಣಾಧಿಕಾರಿಗಳ ನೇತೃತ್ವದಲ್ಲಿ ನಡೆಸಬೇಕು. | **ಪದಾಧಿಕಾರಿಗಳ ಚುನಾವಣೆ:**<br>ಬ್ಯಾಂಕಿನ ಪದಾಧಿಕಾರಿಗಳ ಪದಾವಧಿಯು ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಮತ್ತು ಅದು ಮಂಡಳಿಯ ಅವಧಿಯ ಜೊತೆಗೆ ಅಂತ್ಯಗೊಳ್ಳತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕನು ಸಾಮಾನ್ಯ ಚುನಾವಣೆಯ ತರುವಾಯ, ಮಂಡಳಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ ಚುನಾವಣೆಗಾಗಿ ಮಂಡಳಿಯ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ, ಉಪಾಧ್ಯಕ್ಷನ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂತ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |
| | 48.3<br>(ಅ) | ಬ್ಯಾಂಕಿನ ಆಡಳಿತ ಮಂಡಳಿಯ ಚುನಾಯಿತ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ.<br><br>ಅವಿಶ್ವಾಸ ಗೊತ್ತುವಳಿ ತಲುಪಿದ ಏಳು ದಿನಗಳೊಳಗಾಗಿ ಮುಖ್ಯ ಕಾರ್ಯನಿರ್ವಾಹಕನು ಅದರ ಪ್ರತಿಯನ್ನು ಕಾರ್ಯಕ್ಷೇತ್ರದ ನಿಬಂಧಕರಿಗೆ ತಲುಪಿಸತಕ್ಕದ್ದು. | ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ. ಬ್ಯಾಂಕಿನ ವೃತ್ತಿಪರ ನಿರ್ದೇಶಕ ಅವಿಶ್ವಾಸ ನಿರ್ಣಯದ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ.<br><br>ಅವಿಶ್ವಾಸ ಗೊತ್ತುವಳಿ ತಲುಪಿದ ಏಳು ದಿನಗಳೊಳಗಾಗಿ ಮುಖ್ಯ ಕಾರ್ಯನಿರ್ವಾಹಕನು ಅದರ ಪ್ರತಿಯನ್ನು ಕಾರ್ಯಕ್ಷೇತ್ರದ ನಿಬಂಧಕರಿಗೆ ತಲುಪಿಸತಕ್ಕದ್ದು. | |
| 7. | 52<br>(ಆ) | **ನಿರ್ದೇಶಕರ ಅರ್ಹತೆ:**<br>ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು ಅನರ್ಹತೆ:<br><br>ಹೊಸ ಸೇರ್ಪಡೆ | **ನಿರ್ದೇಶಕರ ಅರ್ಹತೆ:**<br>ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು ಅನರ್ಹತೆ:<br><br>2. ಪ್ರತಿ ಚುನಾಯಿತ ನಿರ್ದೇಶಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ತನ್ನ ಮತ್ತು ತನ್ನ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸದಿದ್ದರೆ. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| | | | (ಈ ಖಂಡದ ಉದ್ದೇಶಕ್ಕಾಗಿ ಕುಟುಂಬ ಅಂದರೆ, ನಿರ್ದೇಶಕ ಮತ್ತು ಅವನ/ಅವಳ ಪತಿ/ ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ).<br><br>ಕಾಯ್ದೆಯಡಿ, ನಿಯಮಗಳಡಿ ಮತ್ತು ಉಪವಿಧಿಗಳಡಿ ಬೇರೆ ಯಾವುದೇ ಅನರ್ಹತೆಗೆ ಗುರಿಯಾಗಿದ್ದರೆ-ಅನರ್ಹನಾಗತಕ್ಕದ್ದು. | |
| 8. | 55<br>(1)<br><br><br><br><br>(2) | ಮಂಡಳಿಯ ತೆರವಾದ ಸ್ಥಾನಗಳು :<br>ಮಂಡಳಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರವು ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು.<br><br>ಮಂಡಳಿಯ ಉಳಿದಿರುವ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಕಡಿಮೆ ಇರುವಲ್ಲಿ ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹಮತದಿಂದ(co-option) ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | ಮಂಡಳಿಯ ತೆರವಾದ ಸ್ಥಾನಗಳು :<br>ಬ್ಯಾಂಕಿನ ಮಂಡಳಿಯ ನಿರ್ದೇಶಕರ ಪದದಲ್ಲಿ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅನರ್ಹತೆ ಅಥವಾ ಇನ್ನಾವುದೇ ಕಾರಣದಿಂದ ಮಂಡಳಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹಮತದಿಂದ(Co-option) ನಾಮನಿರ್ದೇಶನ ಮಾಡುವ ಮೂಲಕ ಮಂಡಳಿಯು ಖಾಲಿ ಸ್ಥಾನ ಭರ್ತಿ ಮಾಡತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |
| 9. | 59<br>59.53 | ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:<br>ಹೊಸ ಸೇರ್ಪಡೆ | ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:<br>(2) ಪ್ರತಿ ಚುನಾಯಿತ ನಿರ್ದೇಶಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ತನ್ನ ಮತ್ತು ತನ್ನ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು. ಈ ಖಂಡದ ಉದ್ದೇಶಕ್ಕಾಗಿ ಕುಟುಂಬ ಅಂದರೆ, ನಿರ್ದೇಶಕ ಮತ್ತು ಅವನ/ಅವಳ ಪತಿ/ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| | 59.54 | ಲೆಕ್ಕಪರಿಶೋಧಕನಿಗೆ ಅಗತ್ಯವಾದ ಎಲ್ಲಾ ಮಾಹಿತಿ, ಲೆಕ್ಕಗಳನ್ನು ಮತ್ತು ಪುಸ್ತಕಗಳನ್ನು ಒದಗಿಸಿ ಸಕಾಲದಲ್ಲಿ ಲೆಕ್ಕಪರಿಶೋಧನೆಯು ಮುಕ್ತಾಯಗೊಳಿಸಲು ಪೂರ್ಣ ಸಹಕಾರ ಮತ್ತು ನೆರವನ್ನು ನೀಡಿ, ಪ್ರತಿ ವರ್ಷ ಸೆಪ್ಟೆಂಬರ್ 1ನೇ ದಿನದೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪತ್ರಗಳ ಪರಿಶೋಧನಾ ವರದಿಯನ್ನು ಪಡೆಯತಕ್ಕದ್ದು: | ಲೆಕ್ಕಪರಿಶೋಧಕನಿಗೆ ಅಗತ್ಯವಾದ ಎಲ್ಲಾ ಮಾಹಿತಿ, ಲೆಕ್ಕಗಳನ್ನು ಮತ್ತು ಪುಸ್ತಕಗಳನ್ನು ಒದಗಿಸಿ ಸಕಾಲದಲ್ಲಿ ಲೆಕ್ಕಪರಿಶೋಧನೆಯು ಮುಕ್ತಾಯಗೊಳಿಸಲು ಪೂರ್ಣ ಸಹಕಾರ ಮತ್ತು ನೆರವನ್ನು ನೀಡಿ, ಪ್ರತಿ ವರ್ಷ ಜೂನ್ 30 ನೇ ದಿನದೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪತ್ರಗಳ ಪರಿಶೋಧನಾ ವರದಿಯನ್ನು ಪಡೆಯತಕ್ಕದ್ದು. | |
| | 59.55 | ಮಂಡಳಿಯ ಉಳಿದ ಅವಧಿಯು ಅದರ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಇದ್ದಾಗ, ಮಂಡಳಿಯಲ್ಲಿ ಯಾವುದೇ ಕಾರಣದಿಂದ ಉದ್ಭವವಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಅಭಿಮತದಿಂದ ಸೇರಿಸಿಕೊಳ್ಳುವ (ಕೋ–ಆಪ್ಷನ್) ಮೂಲಕ ಭರ್ತಿ ಮಾಡುವುದು; | ಮಂಡಳಿಯಲ್ಲಿ ಯಾವುದೇ ಕಾರಣದಿಂದ ಉದ್ಭವವಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಅಭಿಮತದಿಂದ ಸೇರಿಸಿಕೊಳ್ಳುವ (ಕೋ–ಆಪ್ಷನ್) ಮೂಲಕ ಭರ್ತಿ ಮಾಡುವುದು; | |
| 10. | 60<br>60.38 | ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು :<br>ಸಾಮಾನ್ಯ ಚುನಾವಣೆ ಆಗಿ ಮಂಡಳಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗೆ, ಸಹಕಾರ ಚುನಾವಣಾ ಆಯೋಗವು ನಿಗಧಿಪಡಿಸಿದಂತೆ, ಪದಾಧಿಕಾರಿಗಳ ಚುನಾವಣೆಗಾಗಿ ಮಂಡಳಿಯ ಸಭೆಯನ್ನು ಕರೆಯತಕ್ಕದ್ದು. | ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು :<br>ಸಾಮಾನ್ಯ ಚುನಾವಣೆ ಆಗಿ ಮಂಡಳಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನದೊಳಗೆ ಪದಾಧಿಕಾರಿಗಳ ಚುನಾವಣೆಗಾಗಿ ಮಂಡಳಿಯ ಸಭೆಯನ್ನು ಕರೆಯತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |
| | | ಹೊಸ ಸೇರ್ಪಡೆ | 60.53 ಮುಖ್ಯ ಕಾರ್ಯನಿರ್ವಾಹಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ತನ್ನ ಮತ್ತು ತನ್ನ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು. ಈ ಖಂಡದ ಉದ್ದೇಶಕ್ಕಾಗಿ ಕುಟುಂಬ ಅಂದರೆ, ಮುಖ್ಯ ಕಾರ್ಯನಿರ್ವಾಹಕ ಮತ್ತು ಅವನ/ ಅವಳ ಪತಿ/ ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 11. | 91 | **ಲೆಕ್ಕಗಳು:**<br>ಹೊಸ ಸೇರ್ಪಡೆ | **ಲೆಕ್ಕಗಳು :**<br>2 ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕನು ಲೆಕ್ಕಪತ್ರಗಳನ್ನು, ಪುಸ್ತಕಗಳನ್ನು, ಲೆಕ್ಕಗಳನ್ನು, ದಸ್ತಾವೇಜುಗಳನ್ನು ಮತ್ತು ಇತರೆ ದಾಖಲೆಗಳನ್ನು ದೈನಂದಿನ ಆಧಾರದ ಮೇಲೆ ನಿಯತವಾಗಿ ನಿರ್ವಹಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು ಹಾಗೂ ಅಂತಹ ಲೆಕ್ಕಪತ್ರಗಳನ್ನು ಹಿಂದಿನ ಸಹಕಾರ ವರ್ಷದಲ್ಲಿದ್ದಂತೆ ಆಸ್ತಿ ಹೊಣೆ ಪಟ್ಟಿ, ಷೆಡ್ಯೂಲುಗಳನ್ನು ಮತ್ತು ಇತರೆ ತ:ಖ್ತೆಗಳನ್ನು ಒಳಗೊಂಡ ಆರ್ಥಿಕ ತ:ಖ್ತೆಗಳ ಸಹಿತ ಪ್ರತಿ ವರ್ಷ ಏಪ್ರಿಲ್ ತಿಂಗಳ ಅಂತ್ಯದೊಳಗೆ ಲೆಕ್ಕಪರಿಶೋಧಕನ ಮುಂದೆ ಹಾಜರುಪಡಿಸಲು ವ್ಯವಸ್ಥೆ ಮಾಡತಕ್ಕದ್ದು. ಪ್ರತಿ ವರ್ಷ ಭಾರತೀಯ ರಿಜರ್ವ್ ಬ್ಯಾಂಕು ಅನುಮೋದಿಸಿ ಬ್ಯಾಂಕಿನ ಸಾಮಾನ್ಯ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕನು ಲೆಕ್ಕಪತ್ರಗಳನ್ನು ಪರಿಶೋಧಿಸತಕ್ಕದ್ದು.<br>3. ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಜೂನ್ 30ನೇ ತಾರೀಖಿನೊಳಗೆ ಪಡೆಯತಕ್ಕದ್ದು ಮತ್ತು ಅದರಲ್ಲಿ ತಿಳಿಸಿರುವ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮವನ್ನುಳ್ಳ ಮಂಡಳಿಯ ಅನುಪಾಲನಾ ವರದಿ ಸಹಿತ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ 25ನೇ ದಿನದೊಳಗೆ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು.<br>4 ಬ್ಯಾಂಕಿನ ಸಾಮಾನ್ಯ ಸಭೆಯು ಲೆಕ್ಕಪರಿಶೋಧನಾ ನಿರ್ದೇಶಕನಿಂದ ಕಾಲಕಾಲಕ್ಕೆ ಹೊರಡಿಸಲಾದ ಮಾರ್ಗಸೂಚಿಗಳನುಸಾರವಾಗಿ ಲೆಕ್ಕಪರಿಶೋಧಕನ ಸೇವೆಗಳಿಗೆ ನೀಡಬಹುದಾದ ಸಂಭಾವನೆಯನ್ನು ನಿರ್ಧರಿಸತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |
| 12. | 92<br>92.3 | **ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳು :**<br>ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಲಾಭ ನಷ್ಟದ ಪಟ್ಟಿಯನ್ನು ಲೆಕ್ಕಪರಿಶೋಧಕರ ವರದಿಯೊಂದಿಗೆ ಸಾಲಾಖೈರಿನ 6 ತಿಂಗಳೊಳಗಾಗಿ ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಹಾಗೆ ಆರು ತಿಂಗಳೊಳಗಾಗಿ ಪ್ರಕಟಿಸಲು ಸಾಧ್ಯವಾಗದಿದ್ದಲ್ಲಿ 3 ತಿಂಗಳ ಕಾಲಾವಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪಡೆಯಬೇಕು. | **ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳು :**<br>ಆಸ್ತಿ ಜವಾಬ್ದಾರಿ ಪಟ್ಟಿ, ಲಾಭ ನಷ್ಟ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳನ್ನು ಲೆಕ್ಕಪರಿಶೋಧಕರ ವರದಿಯೊಂದಿಗೆ ಸಾಲಾಖೈರಿನ 3 ತಿಂಗಳೊಳಗಾಗಿ ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಪ್ರಸಾರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಹಾಗೆ 3 ತಿಂಗಳೊಳಗಾಗಿ ಪ್ರಕಟಿಸಲು ಸಾಧ್ಯವಾಗದಿದ್ದಲ್ಲಿ 3 ತಿಂಗಳ ಕಾಲಾವಕಾಶವನ್ನು ಭಾರತೀಯ ರಿಜರ್ವ್ ಬ್ಯಾಂಕಿನಿಂದ ಪಡೆಯತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಸೂಚಿಸಿದೆ. |

# : ಸೂಚನೆಗಳು :

1. ವಾರಸುದಾರರ ಬದಲಾವಣೆ ಇದ್ದಲ್ಲಿ ಕೂಡಲೇ ನೋಂದಾಯಿಸಲು ಕೋರಲಾಗಿದೆ.

2. ಷೇರು ಪ್ರಮಾಣ ಪತ್ರಗಳನ್ನು ಇದುವರೆಗೆ ಪಡೆಯದೆ ಇರುವ ಸದಸ್ಯರು ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪಡೆಯಲು ಕೋರಿದೆ.

3. ಆಡಳಿತ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ದಿನಾಂಕ 21–08–2026 ರಿಂದ ನೀಡಲಾಗುವುದು. ಪರ್ಯಾಯ ವ್ಯವಸ್ಥೆಯಾಗಿ ಇ–ಮೇಲ್ ವಿಳಾಸ ನೀಡಿದ ಸದಸ್ಯರಿಗೆ Soft copy ಮುಖಾಂತರ ಕಳುಹಿಸಲಾಗುವುದು ಹಾಗೂ ವೆಬ್‌ಸೈಟ್‌ನಲ್ಲಿ ಆಡಳಿತ ವರದಿಯನ್ನು ಪ್ರಕಟಿಸಲಾಗುವುದು.

4. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಿದ್ದಲ್ಲಿ ಸದಸ್ಯರು ದಿನಾಂಕ 31–08–2026 ರೊಳಗೆ ಮುಖ್ಯ ಕಾರ್ಯನಿರ್ವಾಹಕರಿಗೆ ಲಿಖಿತ ಮೂಲಕ ಸಲ್ಲಿಸಲು ಕೋರಿದೆ.

5. ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಲು ಗುರುತಿನ ಚೀಟಿ ಕಡ್ಡಾಯವಾಗಿದ್ದು, ಸದಸ್ಯತ್ವದ ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರು ತಮ್ಮ ಭಾವಚಿತ್ರವನ್ನು ಸಲ್ಲಿಸಿ ಗುರುತಿನ ಚೀಟಿಯನ್ನು ಪಡೆಯಲು ಕೋರಿದೆ.

6. ಬ್ಯಾಂಕಿನ ಸದಸ್ಯರು ಬ್ಯಾಂಕು ನೀಡುತ್ತಿರುವ ವೈದ್ಯಕೀಯ ತಪಾಸಣೆ ಹಾಗೂ ಶುಶ್ರೂಷೆ ಮತ್ತು ಶಸ್ತ್ರ ಚಿಕಿತ್ಸೆಗೆ ನೀಡುವ ಸೌಲಭ್ಯ ಪಡೆಯಲು ಕನಿಷ್ಠ 50 ಷೇರುಗಳನ್ನು ಹೊಂದಿರಬೇಕಾಗಿದ್ದು, 50 ಷೇರುಗಳಿಗಿಂತ ಕಡಿಮೆ ಷೇರುಗಳನ್ನು ಹೊಂದಿರುವ ಸದಸ್ಯರು ಹೆಚ್ಚುವರಿ ಷೇರುಗಳನ್ನು ಪಡೆಯತಕ್ಕದ್ದು.

**ಸಿ.ಆರ್. ನಟರಾಜ್**
ಉಪಾಧ್ಯಕ್ಷರು

**ಹೆಚ್.ಎಂ. ದಿವ್ಯಾನಂದಮೂರ್ತಿ**
ಅಧ್ಯಕ್ಷರು